**ಏಪ್ರಿಲ್, 2020**

## ಮೇಷ




ಮಂದಮಾರುತದಂತಹ ಬದಲಾವಣೆಗೆ ವಿಚಲಿತರಾಗಬೇಡಿ. ನಿಮ್ಮನ್ನು ನೀವೇ ಅರಿತುಕೊಳ್ಳಲು ಇದು ಸುಸಮಯ. ವಾತಾವರಣದ ಬದಲಾವಣೆಯಿಂದ ಮನೆಯಲ್ಲಿ ಪ್ರಗತಿ. ನಿಧಾನವಾಗಿ ಗುರಿ ತಲುಪುವುದು ಕ್ಷೇಮ.

**ಶುಭ:** 1, 12, 11

**ಅಶುಭ:** 6, 8, 18

## ಕರ್ಕಾಟಕ



ದೈವಾರಾಧನೆಯ ಅಗತ್ಯ ಮುಂದುವರೆಯಲಿದೆ. ಕುಟುಂಬ, ಸಂಪತ್ತು ಮತ್ತು ಮನೆ ರಕ್ಷಣೆಯ ಜವಾಬ್ದಾರಿ ನಿಮ್ಮ ಮೇಲಿದೆ. ವ್ಯವಹಾರದಲ್ಲಿ ಲಾಭವೂ ಇಲ್ಲ, ನಷ್ಟವೂ ಇಲ್ಲ. ಇತರರನ್ನು ನಂಬುವ ಮುನ್ನ ಯೋಚಿಸಿ.

**ಶುಭ:** 4, 8, 12

**ಅಶುಭ:** 14, 9, 20

## ವೃಷಭ




ಬೇಡದ ದಾರಿಯನ್ನು ಕ್ರಮಿಸಬೇಕಾದ ಪ್ರಸಂಗ ಬರಬಹುದು. ನಿರಾಸಕ್ತಿ ಯಾವುದಕ್ಕೂ ಪರಿಹಾರವಲ್ಲ. ಕಣ್ಣಿನ ತೊಂದರೆಯನ್ನು ನಿರ್ಲಕ್ಷ್ಯ ಮಾಡಬೇಡಿ. ಮಂಗಳಕಾರ್ಯವನ್ನು ಮುಂದೂಡುವುದು ಒಳಿತು.

**ಶುಭ:** 3, 16, 19

**ಅಶುಭ:** 12, 21, 23

## ಸಿಂಹ



ಶುಭಫಲಗಳು ಬಾಗಿಲಲ್ಲಿ ನಿಂತಿವೆ. ಒಳತರಲು ನಿಮ್ಮ ಪ್ರಯತ್ನವೂ ಬೇಕು. ಜೀವನದಲ್ಲಿ ಒದಗಿ ಬಂದಿದ್ದರ ಬಗ್ಗೆ ಸಂತಸವಿರಲಿ. ಉತ್ಸಾಹದಿಂದ ನಿಮ್ಮ ಕೆಲಸದಲ್ಲಿ ಮುಂದುವರೆಯಿರಿ. ಎಲ್ಲವೂ ಒಳಿತಾಗುವುದು.

**ಶುಭ:** 5, 20, 10

**ಅಶುಭ:** 4, 12, 13, 24

## ಮಿಥುನ



ಬಯಕೆಯೂ ಕಾಲವೂ ಸರಿಯಾಗಿ ಮೇಳೈಸಿದೆ. ಆಸೆಗಳ ಶುಭಾರಂಭ ಮಾಡಿ. ಪ್ರಚಾರಕ್ಕೆ ಆದ್ಯತೆ ಕೊಡದೇ ಮೊದಲು ಕೆಲಸ ಮಾಡಿ. ತಿಂಗಳಾಂತ್ಯದಲ್ಲಿ ಶುಭ ಫಲಗಳನ್ನು ನಿರೀಕ್ಷಿಸಬಹುದು. ಕುಟುಂಬದಲ್ಲಿ ಸಂತಸ.

**ಶುಭ:** 6, 13, 23

**ಅಶುಭ:** 4, 7, 24

## ಕನ್ಯಾ



ಭ್ರಮಾಲೋಕದಿಂದ ತೆರವಾದ ನಿಮ್ಮ ಮನಸ್ಸು ವಾಸ್ತವಕ್ಕೆ ನಿಧಾನವಾಗಿ ಹೊಂದಿಕೊಳ್ಳುವುದು. ನಿಮ್ಮ ಕೆಲಸಗಳಿಗೆ ತಾತ್ಕಾಲಿಕ ಅಡೆತಡೆಗಳು ಬರಬಹುದು. ಆದರೂ ಮುಂದೆ ಒಳ್ಳೆಯದೇ ಆಗಲಿದೆ.

**ಶುಭ:** 6, 18, 24

**ಅಶುಭ:** 5, 11, 21